ರಾವ್ ಮನ ತುಂಬಿ ನಕ್ಕರು.

"ನಿನ್ನ ಮೊಂಡ ಮೂಗು ಸಿಟ್ಟಿನಿಂದ ಕೆಂಪಾಗಿರುವುದನ್ನು ಬೆಳಿಗ್ಗೇನೆ ನೋಡಲು ಇಷ್ಟ..."

"ಸರ್ ಒಂದು ವಾರದಿಂದ ದಿವಾಕರ್ ತನ್ನ ಹೆಂಡ್ತೀನಾ ಕರ್ಕೊಂಡು ಬರ್ತಾ ಇಲ್ವೆ? ಸ್ವಲ್ಪಾನೂ ಇಂಪ್ರೊವ್‌ಮೆಂಟಿಲ್ಲಾಂತಾನೆ. ಅದು ಕೂಡಾ ಹೌದು ಅವಳು ಬಾಯಿ ಬಿಡುವುದಕ್ಕೆ ಇಲ್ಲ. ಎಷ್ಟು ಮಾತನಾಡಿಸಿದರೂ ಕಲ್ಲುಗೊಂಬೆಯಂತೆ ಎತ್ತಲೋ ನೋಡುತ್ತಾ ಕುಳಿತು ಬಿಡುತ್ತಾಳೆ..."

"ಏನು ಕಂಪ್ಲೇಂಟ್ಸ್?"

"ಈಗ ಮದುವೆಯಾಗಿ ಹೆಚ್ಚು ಕಡಿಮೆ ಆರು ವರ್ಷಗಳಾಗಿರಬಹುದು ಸರ್. ಒಳ್ಳೆಯ ಸುಂದರ ಜೋಡಿ. ಒಳ್ಳೆಯ ದಂಪತಿಯೂ ಕೂಡ. ಇತ್ತೀಚೆಗೆ ಅಂದರೆ ಆರೇಳು ತಿಂಗಳಿಂದ ಇದ್ದಕ್ಕಿದ್ದ ಹಾಗೆ ಬದಲಾಗಿದ್ದಾಳಂತೆ. ಆಡ್ತಾ ಇದ್ದ ಮಗು ರಚ್ಚೆ ಹಿಡಿದರೆ ತಮಾಷೆಗೆ 'ಕಿಟಕಿಯಿಂದ ಹೊರಗೆ ಹಾಕ್ತೀವಿ ನೋಡೂಂತ' ನಾವು ಅನ್ನೋಲ್ವಾ... ಅವಳು ನಿಜಕ್ಕೂ ಎತ್ತಿ ಬಿಸಾಕಿ ಬಿಡ್ತಾಳಂತೆ. ಗಂಡನ ಪಕ್ಕದಿಂದ ತಟಕ್ಕನೆ ಎದ್ದು ಹೊರಗೆ ಹೋಗಿ ಒಬ್ಬಳೇ ಕುಳಿತು ಚಿಕ್ಕ ಮಗುವಿನಂತೆ ಅಳಲು ಪ್ರಾರಂಭಿಸ್ತಾಳಂತೆ. ಬೆಳಿಗ್ಗೆ ಕೇಳಿದರೆ 'ಎಲ್ಲಾ ಸುಳ್ಳು' ಅಂತಾಳಂತೆ..."

"ಗಂಡ ಏನು ಹೇಳ್ತಾನೆ?"

"ದೇವರಂಥ ಮನುಷ್ಯ ಸಹ. ಅವಳು ಜಾಸ್ತಿ ಮಾತಿನವಳಲ್ಲ. ಒಳಗೆ ಏನನ್ನೊ ಇಟ್ಟುಕೊಂಡು ಕೊರಗತಾ ಇದ್ದಾಳೆ. ದಯವಿಟ್ಟು ಪತ್ತೆ ಮಾಡಿ ಸರಿಮಾಡಿಕೊಡಿ. ಅವಳಿಲ್ಲದೇ ಖಂಡಿತಾ ನಾನಿರೋಲ್ಲ... ಆಮೇಲೆ ಈ ಮಗು ಗತಿಯೇನು... ಡಾಕ್ಟರ್ ಸರಿಯಾಗ್ತಾಳೆಯೇ? ಹೇಳಿ ಪ್ಲೀಸ್..." ಅಂತ ಒಂದೆ ಸಮನೆ ಹಿಂದೆ ಹಿಂದೆ ತಿರುಗಿ ಕೇಳ್ತಿರ್ತಾನೆ.

"ರೌಂಡ್ಸ್‌ಗೆ ಬರೋಲ್ವಾ?" ಹೊರಗಡೆಯೇ ನಿಂತು ಕರೆದರು.

"ಊಹೂಂ... ಇವತ್ತೊಂದು ಕೇಸಿಗೆ ನಾರ್ಕೊ ಅನಾಲಿಸಿಸ್ ಮಾಡ್ತೀನಿಂತ ಅಪಾಯಿಂಟ್‌ಮೆಂಟ್ ಕೊಟ್ಟಿದ್ದಿರಿ. ಅವರಿಲ್ಲಿ ಕಾಯ್ತಾ ಇದ್ದಾರೆ. ನೀವು ಬೇಗ ಬಂದುಬಿಡಿ..." ವಿಜಯಾ ಬಾಗಿಲವರೆಗೂ ಹೋಗಿ ಹೇಳಿಬಂದು, ಮೇಜಿನ ಮೇಲಿದ್ದ ಕೇಸ್ ಪೇಪರುಗಳನ್ನು ಕೈಗೆತ್ತಿಕೊಂಡಳು.

ಹೊರಗಿನ ಬೆಂಚಿನ ಮೇಲೆ ಕುಳಿತಿದ್ದ ಅನೇಕ ರೋಗಿಗಳ ಸಾಲಿನ ಮಧ್ಯದಲ್ಲೂ ಆ ದಂಪತಿಯನ್ನು ಗುರುತಿಸಿ ಒಳಗೆ ಕರೆದು, 'ಈ ಪೇಪರ್‌ಗೆ ಸೈನ್ ಮಾಡಿ...' ಎನ್ನುತ್ತಾ ಕನ್ಸೆಂಟ್ ಫಾರಂನ್ನು ನೀಡಿದಳು.

"ಏನೂ ಅಪಾಯವಿಲ್ಲತಾನೇ ಡಾಕ್ಟರ್..." ಆಕೆಯ ಗಂಡ ಆತಂಕದಿಂದ ಕೇಳಿದ.

ಮೃದುವಾಗಿ ನಕ್ಕ ವಿಜಯಾ, "ಇದೇನು ದೊಡ್ಡ ಆಪರೇಷನ್ ಅಲ್ಲಾ ಸರ್... ಒಂದು ವಾರದಿಂದ ಓಡಾಡ್ತಾ ಇದ್ದೀರಾ... ಏನೂ ಪ್ರಯೋಜನವಾಗ್ತಾಯಿಲ್ಲ... ಔಷಧಿಗಳು ದಂಡ. ಕೂತ್ಕೊಳ್ಳಿ... ನಿಮಗೆ ವಿವರವಾಗಿ ಹೇಳ್ತೀನಿ ಹೆದರೋ ಕಾರಣವಿಲ್ಲ" ಎನ್ನುತ್ತ ಎದುರಿಗಿದ್ದ ಕುರ್ಚಿಗಳನ್ನು ತೋರಿಸಿದಳು. ದಂಪತಿ ಕುಳಿತರು. ನೀಳವಾದ ಜಡೆ. ಕಂದು ಬಣ್ಣದ ಆಕರ್ಷಕವಾದ ಅವಳ ಮುಖ ಕಾಂತಿಹೀನವಾಗಿತ್ತು. ಕಣ್ಣುಗಳಲ್ಲಿ ಯಾವುದೋ ಖಿನ್ನತೆ, ದಟ್ಟವಾದ ನಿರಾಶೆ, ನೋವು... ಒಣಗಿ ನಿಧಾನವಾಗಿ ಕಂಪಿಸುತ್ತಿದ್ದ ತುಟಿಗಳು...

ವಿಜಯಾ ಆ ಗಂಡಸಿನತ್ತ ತಿರುಗಿ, "ಈ ಫಾರಂನ್ನು ಓದಿ ನೋಡಿ. ನಾರ್ಕೊ ಅನಾಲಿಸಿಸ್ ಅಂದರೆ, ಔಷಧಿಗಳು ರೋಗಿಯ ಮೇಲೆ ಯಾವ ಪರಿಣಾಮವನ್ನು ಬೀರದಿದ್ದಾಗ ನೀಡುವ ಒಂದು ಮನೋದೈಹಿಕ ಚಿಕಿತ್ಸೆ. ಇಂತಹ ರೋಗಿಗಳಿಗೆ, ಕ್ಷಮಿಸಿ ನಿಮ್ಮ ಹೆಂಡತಿಗೆ ರೋಗಿಯೆಂದು ಬಿಟ್ಟೆ..."